**ದಿನಾಂಕ: 06-03-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

1. ನನಗೆ ಕಿರಾಣಿ ಅಂಗಡಿ ಇರುತ್ತದೆ. ಕಿರಾಣಿ ಅಂಗಡಿ ನಡೆಸಲು ಲೈಸೆನ್ಸ್ ಏನಾದರೂ ಇದೆಯಾ ಎಂದರೆ ಮುನಿಸಿಪಾಲಿಟಿಯಿಂದ ಅನುಮತಿ ಪಡೆದಿರುತ್ತೇನೆ ಎಂದು ಉತ್ತರಿಸುತ್ತಾರೆ. ಮುನಿಸಿಪಾಲಿಟಿಯಿಂದ ಅನುಮತಿ ಪಡೆದಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಕಿರಾಣಿ ಅಂಗಡಿಯಿಂದ ತಿಂಗಳಿಗೆ 20 ಸಾವಿರ ಆದಾಯ ಬರುತ್ತಿತ್ತು. ಕಿರಾಣಿ ಅಂಗಡಿಯಿಂದ ತಿಂಗಳಿಗೆ 20 ಸಾವಿರ ಆದಾಯ ಬರುತ್ತಿತ್ತು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಕಿರಾಣಿ ವ್ಯಾಪಾರ ಮಾಡುತ್ತಿದ್ದೀರಿ ಅದರಿಂದ ತಿಂಗಳಿಗೆ 20 ಸಾವಿರ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಅಪಘಾತವಾದಾಗ ನನ್ನ ವಯಸ್ಸು 42 ವರ್ಷ ಇತ್ತು. ನನ್ನ ಆಧಾರ್ ಕಾರ್ಡ್ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅಪಘಾತವಾದ ಸಮಯದಲ್ಲಿ ನಿಮ್ಮ ವಯಸ್ಸು 50 ವರ್ಷ ಮೇಲೆ ವಯಸ್ಸು ಇದ್ದರೂ ಸಹ 42 ವರ್ಷ ವಯಸ್ಸು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತವಾಗಿ 2 ವರ್ಷ ಮೇಲೆ ಆಗಿರುತ್ತದೆ ದಿನಾಂಕ ನೆನಪಿಲ್ಲ. ಅಪಘಾತವಾದ ದಿನ ಮುನಿಸಿಪಾಲಿಟಿಗೆ ಹೋಗಿ ಅಲ್ಲಿ ರೋಡಿನ ಹತ್ತಿರ ಮಾತನಾಡುತ್ತಾ ನಿಂತಿದ್ದಾಗ ಸೈಕಲ್ ಮೋಟರ್ ಬಂದು ಹಾಯಿಸಿತು. ಅಪಘಾತವು ಮೋಟರ್ ಸೈಕಲದಿಂದ ಆಗಿರುತ್ತದೆ. ಮೋಟರ್ ಸೈಕಲ್ ಹಿಂದಿನಿಂದ ಬಂದು ಅಪಘಾತ ಮಾಡಿರುತ್ತದೆ. ಆ ದಿನ 3 ಜನ ನಿಂತಿದ್ದೆವು. ಆಗ ಸಮಯ ಬೆಳಿಗ್ಗೆ 11 ಗಂಟೆ ಆಗಿತ್ತು. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ. ಅಪಘಾತವಾದ 2-3 ದಿನಗಳವರೆಗೆ ಪ್ರಜ್ಞೆ ಇರಲಿಲ್ಲ. ನಿಮ್ಮ ಜೊತೆಯಲ್ಲಿ ಇದ್ದವರಿಗೆ ಗಾಯ ಏನಾದರೂ ಆಗಿತ್ತಾ ಎಂದರೆ ಸ್ವಲ್ಪ ಸ್ವಲ್ಪ

ಆಗಿತ್ತು ಅವರೆಲ್ಲರಿಗೂ ಪ್ರಜ್ಞೆ ಇತ್ತು. ಅಪಘಾತವಾದ ನಂತರ ನನಗೆ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಕಲ್ಬುರ್ಗಿಯ ಪಿ.ಜಿ.ಶಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

3. ಅಪಘಾತವಾದ ಎಷ್ಟು ದಿನಗಳ ನಂತರ ದೂರನ್ನು ನೀಡಿದ್ದೀರಿ ಎಂದರೆ ಅಪಘಾತವಾದ 2 ದಿನಗಳ ನಂತರ ಆಸ್ಪತ್ರೆಯಲ್ಲಿ ದೂರನ್ನು ನೀಡಿರುತ್ತೇನೆ. ಅಪಘಾತವಾದ ನಂತರ ನಿಮಗೆ ಪ್ರಜ್ಞೆ ಇರಲಿಲ್ಲ ಆದ್ದರಿಂದ ಇದೇ ಮೋಟರಸೈಕಲನಿಂದ ಅಪಘಾತವಾಗಿದೆ ಎಂದು ಯಾವ ರೀತಿ ಆಯಿತು ಎಂದು ಗೊತ್ತಾಯಿತು ಎಂದರೆ ಅಪಘಾತವಾದ ತಕ್ಷಣ ಬಾಜುದವರು ಸದರಿ ಮೋಟರಸೈಕಲನ್ನು ಹಿಡಿದಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಮೋಟರಸೈಕಲ್ ಮಾಲೀಕ ನನಗೆ ಪರಿಚಯ ಇರುವುದಿಲ್ಲ. ಅಪಘಾತವಾದ 2 ದಿನಗಳ ನಂತರ ಇದೇ ಮೋಟರಸೈಕಲನಿಂದ ಅಪಘಾತ ವಾಗಿದೆ ಎಂದು ದಾಖಲೆಗಳನ್ನು ಸೃಷ್ಠಿ ಮಾಡಿ ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು , ಪೊಲೀಸರು ಮತ್ತು ಮೋಟರಸೈಕಲ್ ಮಾಲೀಕರು ಶಾಮೀಲಾಗಿ ಈ ಮೋಟರಸೈಕಲನ್ನು ಈ ಪ್ರಕರಣದಲ್ಲಿ ಸುಳ್ಳಾಗಿ ಸೇರಿಸಿದ್ದೀರಿ ಎಂದರೆ ಸರಿಯಲ್ಲ.

4. ಅಪಘಾತವಾದ ವಿಷಯವನ್ನು ಪಿ.ಜಿ.ಶಾ ಕಲ್ಬುರ್ಗಿ ಆಸ್ಪತ್ರೆಯಲ್ಲಿ ಹೇಳಿ ಬರೆಸಿರುತ್ತೇನೆ. ಅಪಘಾತವಾಗಿರುವ ಬಗ್ಗೆ ಎಂ.ಎಲ್.ಸಿ. ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವುದೇ ಅಪಘಾತ ಆಗಿಲ್ಲದ್ದರಿಂದ ಯಾವುದೇ ಎಂ.ಎಲ್.ಸಿ. ಹಾಜರುಪಡಿಸಿಲ್ಲ ಎಂದರೆ ಅಪಘಾತವಾದ ತಕ್ಷಣ ಎಂ.ಎಲ್.ಸಿ. ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಅಪಘಾತ ಆಗಿದ್ದರೆ ಆಸ್ಪತ್ರೆಯವರು ಪೊಲೀಸರಿಗೆ ಅಪಘಾತದ ವಿಷಯವನ್ನು ತಿಳಿಸುತ್ತಿದ್ದರು ಎಂದರೆ

ಜೇವರ್ಗಿ ಸರಕಾರಿ ಆಸ್ಪತ್ರೆಗೆ ಅಡ್ಮಿಟ್ ಆದ ತಕ್ಷಣ ಪೊಲೀಸರು ಅಲ್ಲಿಗೆ ಬಂದು ಹೋಗಿದ್ದಾರೆ ಎಂದು ಉತ್ತರಿಸುತ್ತಾರೆ. ನೀವೇ ಬಿದ್ದು ಗಾಯ ಮಾಡಿಕೊಂಡಿದ್ದರೂ ಸಹ ಪರಿಹಾರ ಹಣ ಸಿಗಲ್ಲ ಎಂದು ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ಪಿ.ಜಿ.ಶಾ ಆಸ್ಪತ್ರೆಯಲ್ಲಿ 8 ದಿನಗಳು ಇದ್ದೆನು. ಏನು ಗಾಯವಾಗಿದೆ ಎಂದರೆ ಕಾಲು ಮುರಿದು ರಾಡ್ ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ಅಪಘಾತವಾಗಿ 3 ವರ್ಷ ಆಗಿದ್ದರಿಂದ ನಿಮಗೆ ಆಗಿರುವಂತಹ ಗಾಯ ವಾಸಿಯಾಗಿದೆ ಎಂದರೆ ನಡೆದರೆ ಕೂತರೆ ಕಾಲು ಬಾವು ಬರುತ್ತದೆ, ನೋವು ಆಗುತ್ತದೆ ಎಂದು ಉತ್ತರಿಸುತ್ತಾರೆ. ಗಾಯಗಳು ವಾಸಿಯಾಗಿದ್ದರು ಸಹ ನಿಪಿ-8 ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಸೃಷ್ಠಿ ಮಾಡಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಎರಡೂವರೆ ಮೂರು ಲಕ್ಷ ವೈದ್ಯಕೀಯ ಖರ್ಚು ಆಗಿರುತ್ತದೆ. ನೀವು ಈ ಕೇಸಿಗಾಗಿ ಖೊಟ್ಟಿಯಾಗಿ ವೈದ್ಯಕೀಯ ಬಿಲ್ಲುಗಳನ್ನು ಮತ್ತು ವೈದ್ಯಕೀಯ ಚೀಟಿಗಳನ್ನು ಸೃಷ್ಠಿ ಮಾಡಿ ಹಾಕಿರುತ್ತೀರಿ ಎಂದರೆ ಸರಿಯಲ್ಲ.

6. ನಿಮ್ಮ ಅರ್ಜಿಯಲ್ಲಿ ಕೇಳಿದಂತಹ ಪರಿಹಾರವು ಯಾವುದೇ ಆಧಾರ ಇಲ್ಲದೇ ಹಾಕಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ಮೋಟರಸೈಕಲ್ ಚಾಲಕನು ಯಾವುದೇ ಲೈಸೆನ್ಸ್ ಇಲ್ಲದೇ ಚಾಲನೆ ಮಾಡುತ್ತಿದ್ದನು ಎಂದರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಲೈಸೆನಸ್ ಇಲ್ಲದೇ ಸದರಿ ಮೋಟರಸೈಕಲನ್ನು ಚಲಾಯಿಸಿದ್ದರಿಂದ ಪರಿಹಾರ ಹಣವನ್ನು ಮೋಟರಸೈಕಲ್ ಮಾಲೀಕ ಕೊಡಲು ಬಾದ್ಯಸ್ಥ ಇರುತ್ತಾನೆ ಎಂದರೆ ಮೋಟರ ಸೈಕಲ್ ಮಾಲೀಕ ಹಣ ಕೊಡಲ್ಲ ಎಂದಿದ್ದಕ್ಕೆ ಈ ಕೇಸನ್ನು ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿ ಈ ಕೇಸನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ